ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 112
ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
ಉತ್ತರಿಸಬೇಕಾದ ದಿನಾಂಕ : 01-02-2021
ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	"ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ"(KREIS-ಕ್ರೈಸ್) ಅಧೀನದ ವಸತಿ ಶಾಲೆಗಳ ಸಹ ಶಿಕ್ಷಕರುಗಳಿಗೆ ಶಿಕ್ಷಣ ಇಲಾಖೆಗಳ ಸಹ ಶಿಕ್ಷಕರುಗಳ ಮಾದರಿಯಂತೆ, ಮಾನ್ಯ ಉಚ್ಛ ನ್ಯಾಯಾಲಯ ಧಾರವಾಡ ಪೀಠದ ಆದೇಶಾನುಸಾರ ಪ್ರಾಂಶುಪಾಲರ ಹುದ್ದೆಗಳಿಗೆ ಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗಿದೆಯೇ;	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಶಿಕ್ಷಕರುಗಳಿಗೆ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳು-2011 ಹಾಗೂ ಮೀಸಲಾತಿ ಅನುಸಾರ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ನೀಡಲು ಕ್ರಮವಹಿಸಲಾಗಿರುತ್ತದೆ.
ಆ)	ಸದರಿ ವಸತಿ ಶಾಲೆಗಳಲ್ಲಿರುವ ಪ್ರಾಂಶುಪಾಲರ ಖಾಲಿಯಿರುವ ಹುದ್ದೆಗಳಿಗೆ ಸಹ ಶಿಕ್ಷಕರುಗಳನ್ನು ಕಳೆದ 10 ವರ್ಷಗಳಿಂದ ಬಡ್ತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಡ್ತಿ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;	ಹೌದು. 2011 ರ ವೃಂದ ಮತ್ತು ನೇಮಕಾತಿ ನಿಯಮಾವಳಿ ಪ್ರಕಾರ, ಶಿಕ್ಷಕರುಗಳಿಗೆ 50:50 ರಂತೆ ಸಹ ಶಿಕ್ಷಕರುಗಳ ವೃಂದದಿಂದ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ, ಶಿಕ್ಷಕರುಗಳು ಮಾನ್ಯ ಉಚ್ಛ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ರಿಟ್ ಪಿಟಿಷನ್ ಸಂಖ್ಯೆ: 107705-709/ 2018 & 108366-369/2018(EDN) ರಂತೆ ದಾವೆ ಹೂಡಿ, ಸಹ ಶಿಕ್ಷಕರುಗಳಿಗೆ ಜಾರಿಯಲ್ಲಿರುವ ಶೇ.50:50 ರ ಅನುಪಾತದಲ್ಲಿ ಪ್ರಾಂಶುಪಾಲರ ಹುದ್ದೆಗೆ ಭರ್ತಿ ಮಾಡುವುದರ ಬದಲಾಗಿ ಶೇ.75:25 (ಬಡ್ತಿ:ನೇರ ನೇಮಕಾತಿ) ಅನುಪಾತದಲ್ಲಿ ಭರ್ತಿ ಮಾಡಲು ಕೋರಿರುತ್ತಾರೆ. ಸದರಿ ಪ್ರಕರಣವನ್ನು ಆಲಿಸಿದ ಮಾನ್ಯ ಉಚ್ಛ ನ್ಯಾಯಾಲಯವು ದಿ: 25.01.2019ರಲ್ಲಿ ಆದೇಶ ನೀಡಿ, ಸಹ ಶಿಕ್ಷಕರುಗಳ ಹುದ್ದೆಯಿಂದ ಮುಂಬಡ್ತಿ ಮತ್ತು ನೇರ ನೇಮಕಾತಿಯನ್ನು ಶೇ.75:25 (ಬಡ್ತಿ:ನೇರ ನೇಮಕಾತಿ) ಅನುಪಾತದಲ್ಲಿ ಪುರಸ್ಕರಿಸಲು ಆದೇಶಿಸಿದೆ. ಸರ್ಕಾರದ ಆದೇಶ ಸಂಖ್ಯೆ: ಸಕಇ 19 ಮೊದೇಶಾ 2019, ದಿನಾಂಕ: 22.07.2019 ರಲ್ಲಿ ಸಹ ಶಿಕ್ಷಕರುಗಳ ವೃಂದದಿಂದ ಪ್ರಾಂಶುಪಾಲರ ಹುದ್ದೆಗೆ 75:25 (ಬಡ್ತಿ:ನೇರ ನೇಮಕಾತಿ) ಅನುಪಾತದಲ್ಲಿ ಭರ್ತಿ ಮಾಡಲು ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ಸಮಗ್ರ ತಿದ್ದುಪಡಿಯಲ್ಲಿ ಸೇರಿಸಿ ಮಂಜೂರಾತಿ ನೀಡಿ ಆದೇಶಿಸಲಾಗಿದೆ.

		ಅದರಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸಿ, ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಲು ಆಂತರಿಕ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಆಂತರಿಕ ಸಮಿತಿ ಆಕ್ಷೇಪಣೆಗಳ ಬಗ್ಗೆ ಪರಿಶೀಲಿಸಿ, ಸಮಿತಿಯ ಶಿಫಾರಸ್ಸಿನಂತೆ, ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಅಂತಿಮ ಜೇಷ್ಠತಾ ಪಟ್ಟಿಯ ಅನುಸಾರ ಮುಂಬಡ್ತಿ ನೀಡಲು ಅರ್ಹತಾ ಪಟ್ಟಿಯನ್ನು ತಯಾರಿಸಲು ಸಂಬಂದಿಸಿದ ವಸತಿ ಶಾಲೆಯಿಂದ ದಾಖಲಾತಿಗಳನ್ನು ಪಡೆದು ಅರ್ಹತಾ ಪಟ್ಟಿಯನ್ನು ಸಿದ್ದಪಡಿಸಲಾಗಿರುತ್ತದೆ.
ಇ)	ಯಾವ ಕಾಲಮಿತಿಯಲ್ಲಿ ಸಹ ಶಿಕ್ಷಕರುಗಳನ್ನು ಪ್ರಾಂಶುಪಾಲರ ಹುದ್ದೆಗಳಿಗೆ ಬಡ್ತಿ ನೀಡಲಾಗುವುದು?	ದಿನಾಂಕ 27.01.2021 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿ ಹೈದರಾಬಾದ್-ಕರ್ನಾಟಕ ಮೀಸಲಾತಿ ಹಾಗೂ ಮೀಸಲಾತಿ ಕುರಿತಂತೆ ಹೈದರಾಬಾದ್–ಕರ್ನಾಟಕ ವಿಶೇಷ ಕೋಶ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಕ್ರಮವಾಗಿ ಸ್ಪಷ್ಟ ಅಭಿಪ್ರಾಯ ಪಡೆದು ಶಿಕ್ಷಕರಿಗೆ ಮುಂಬಡ್ತಿ ನೀಡಲು ಕ್ರಮವಹಿಸಲು ತೀರ್ಮಾನಿಸಲಾಗಿದ್ದು, ಅದರಂತೆ ಸಹ ಶಿಕ್ಷಕರಿಗೆ ಮುಂಬಡ್ತಿ ನೀಡಲು ಕ್ರಮವಹಿಸಲಾಗುವುದು.

ಸಂಖ್ಯೆ: ಸಕಇ 14 ಮೊದೇಶಾ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.